ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ,ಬೆಂ-12

ಸಂಖ್ಯೆ: ಪಪೂಶಿಇ/ಶೈಸಾ-2/ದ್ವಿ.ಪಿ.ವಿ.ದಾ/2021-22

ದಿನಾಂಕ:22 .10-2021

## ಸುತ್ತೋಲೆ

ವಿಷಯ: ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ವಿಳಂಬ ದಾಖಲಾತಿ ನೀಡುವ ಬಗ್ಗೆ

ಉಲ್ಲೇಖ: 1) ಈ ಕಚೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ:13-10-2021.

2) ಪ್ರಾಂಶುಪಾಲರು ಹಾಗೂ ಪೋಷಕರ ಮನವಿಗಳು.

2021-22 ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ದಾಖಲಾತಿ ಪ್ರಕ್ರಿಯೆಗಳು ಈಗಾಗಲೇ ಪೂರ್ಣಗೊಂಡಿದ್ದು, ಉಲ್ಲೇಖದನ್ವಯ ದಾಖಲಾತಿಗೆ ದಿನಾಂಕ: 05-10-2021 ರವರೆಗೆ ವಿಸ್ತರಿಸಿ ಅವಕಾಶ ನೀಡಲಾಗಿತ್ತು. ಆದಾಗ್ಯೂ ಹಲವಾರು ವಿದ್ಯಾರ್ಥಿಗಳು ಹಾಗೂ ಪೋಷಕರು ಕಾರಣಾಂತರಗಳಿಂದ ದಾಖಲಾತಿ ಮಾಡಲು ಸಾಧ್ಯವಾಗಿಲ್ಲವೆಂದು ಹಾಗೂ ವಿದ್ಯಾರ್ಥಿಗಳಿಗೆ ದಾಖಲಾತಿಗೆ ಅವಕಾಶ ಮಾಡಿಕೊಡಬೇಕೆಂದು ಕೋರಿ ರಾಜ್ಯದ ವಿವಿಧ ಭಾಗಗಳಿಂದ ಮನವಿಗಳು ಬಂದಿರುತ್ತವೆ. ಈ ಹಿನ್ನೆಲೆಯಲ್ಲಿ ಆಯಾ ಜಿಲ್ಲೆಗಳ ಉಪನಿರ್ದೇಶಕರು ಕಾಲೇಜುಗಳಿಂದ ಮನವಿಗಳನ್ನು ಪಡೆದು, ಪಟ್ಟಿಯನ್ನು ಸಿದ್ಧಪಡಿಸಿ ಕೇಂದ್ರ ಕಚೇರಿಯಿಂದ ಅನುಮತಿ ಪಡೆದು ಪಟ್ಟಿಯಲ್ಲಿದ್ದವರಿಗೆ ಮಾತ್ರ ದಾಖಲಾತಿಗೆ ಅನುಮತಿ ನೀಡುವುದು. ಆಯಾ ಜಿಲ್ಲಾ ಉಪನಿರ್ದೇಶಕರು ಕ್ರೋಢೀಕೃತ ಪಟ್ಟಿಯನ್ನು ಕೇಂದ್ರ ಕಚೇರಿಗೆ ಸಲ್ಲಿಸಲು ದಿನಾಂಕ:19-10-2021 ಕೊನೆಯ ದಿನ ನಿಗಧಿಪಡಿಸಿತ್ತು.

ಮತ್ತೆ ಮತ್ತೆ ವಿದ್ಯಾರ್ಥಿಗಳು ಹಾಗೂ ಪೋಷಕರುಗಳಿಂದ ಬೇಡಿಕೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಆಯಾ ಜಿಲ್ಲೆಗಳ ಉಪನಿರ್ದೇಶಕರು ಕೇವಲ ದಾಖಲಾತಿ ಬಯಸಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಮಾತ್ರ ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರಿಂದ ಪಡೆದುಕೊಂಡು ಕ್ರೂಢೀಕೃತ ಪಟ್ಟಿಯನ್ನು ದಿನಾಂಕ: 26-10-2021 ರೊಳಗೆ ಸಲ್ಲಿಸಲು ಮಾನ್ಯ ನಿರ್ದೇಶಕರ ಸೂಚನೆ ಮೇರೆಗೆ ತಿಳಿಸಲಾಗಿದೆ. ಯಾವುದೇ ಕಾರಣಕ್ಕೂ ಕಾಲೇಜು ಬದಲಾವಣೆಗೆ ಅವಕಾಶವಿಲ್ಲವೆಂದು ಮಾನ್ಯ ನಿರ್ದೇಶಕರ ಸೂಚನೆ ಮೇರೆಗೆ ತಿಳಿಸಿದೆ.

ಈ ದಾಖಲಾತಿಯನ್ನು ವಿಶೇಷ ದಂಡಶುಲ್ಕದೊಂದಿಗೆ ರೂ.2890=00 ( ಎರಡು ಸಾವಿರದ ಎಂಟು ನೂರ ತೊಂಭತ್ತು ಮಾತ್ರ) ಮಾಡಿಕೊಳ್ಳುವುದು. ಇನ್ನು ಮುಂದೆ ಯಾವುದೇ ಕಾರಣಕ್ಕೂ ದಾಖಲಾತಿಗೆ ಅವಕಾಶವಿರುವುದಿಲ್ಲವೆಂದು ಸ್ಥಳೀಯ ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ನೀಡಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದೆ.

R. Kusuma 22/10/2021

ಜಂಟಿ ನಿರ್ದೇಶಕರು,

ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ- ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ ಶಾಖೆ ಪಪೂಶಿ- ಇಲಾಖಾ ಜಾಲತಾಣದಲ್ಲಿ ಅಳವಡಿಸಲು.
3. ಕಛೇರಿ ಪ್ರತಿ.

Scanned by CamScanner